**PW**-04

**CW**-08

**ದಿನಾಂಕಃ 01.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಜಿ ಹೆಚ್ ಅವರಿಂದಃ**

1. ನಾನು ವ್ಯವಸಾಯ ಮಾಡುತ್ತೇನೆ. ನಾನು ಗೆಜ್ಜೆಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನಗೆ ಪ್ರಾಸಾ-1 ಜಗದೀಶ ಅವರ ಪರಿಚಯ ಇದೆ. ನಾವು ಒಂದೇ ಊರಿನವರು.
2. ನಾನು ದೇವಸ್ಥಾನದ ಹತ್ತಿರ ಎರಡು ಟ್ರ್ಯಾಕ್ಟರನ್ನು ಸಿಂಗಾರ ಮಾಡುತ್ತಿದ್ದೆ. ಮಾಲತೇಶ ಜೊಗೇರ , ಮೈಲಾರಪ್ಪ ಜೋಗೆರ , ನಾನು , ಮಾಂತೇಶ ಹೀರೆಕಣವಿ ಹಾಗೂ ಊರಿನ ಹಿರಿಯರು ಆ ಸ್ಥಳದಲ್ಲಿ ಇದ್ದರು. ಅಲ್ಲಿ ಗ್ರಾಮ ದೇವಿಯ ಜಾತ್ರೆ ಇದ್ದ ಕಾರಣ 100 ಜನ ಇದ್ದರು.
3. ಅಲ್ಲಿ ಬಹಳಷ್ಟು ಜನ ಇದ್ದ ಕಾರಣ ಹೊರಗೆ ನಡೆಯವುದು ಏನು ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1 ಜಗದೀಶ ಅವರ ಮನೆಯ ಪಕ್ಕದಲ್ಲಿ ಲಕ್ಷ್ಮಣ ಕಾಕು , ಮಂಜು ಹೀರೆಕಣವಿ ಅವರ ಮನೆ , ರಸ್ತೆ ಹಾಗೂ ದೇವಸ್ಥಾನ ಇದೆ.
4. ನಮ್ಮ ಮನೆ ದೇವಸ್ಥಾನದ ಎದುರುಗಡೆ ಇದೆ . KA-27/EJ-8339 ವಾಹನ ಜಗದೀಶ ಅವರ ಮನೆಯ ಮುಂದೆ ನಿಂತ ಕಾರಣ ಅದನ್ನು ನೋಡಿ ಹೇಳಿರುತ್ತೇನೆ. ಸದರಿ ವಾಹನ ಜಗದೀಶ ಅವರ ಮನೆಯ ಮುಂದೆ ರಾತ್ರಿ 10.00 ಗಂಟೆಯಿಂದ ನಿಂತಿತ್ತು.
5. ದಿಃ 22.03.2022 ರಂದು ಸಂಜೆ 5.00 ಗಂಟೆಗೆ ವಡ್ಡರ ಓಣಿಯ ಜನ ಜಗದೀಶ ಅವರನ್ನು ನೀರು ಬಿಡಲು ಕೇಳಲು ಹೋದ ಬಗ್ಗೆ ನನಗೆ ಮಾಹಿತಿ ಇದೆ.
6. ಆರೋಪಿತರು ಹಾಗೂ ಜಗದೀಶ ಮಧ್ಯೆ ಮಾತು ಬೆಳೆದು ಜಗಳ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರ ವಾಹನವನ್ನು ಜಗದೀಶ ಅಲ್ಲಿಯೇ ತನ್ನ ಮನೆಯ ಬಳಿಯೇ ಸಾಯಂಕಾಲ 5.00 ಗಂಟೆಯಿಂದ ಹಿಡಿದು ಇಟ್ಟುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ.

7. ಶೈಲಾ ವಡ್ಡರ ಇವರು ಜಗದೀಶ ಹಾಗೂ ಇತರರ ಮೇಲೆ ಆ ದಿನ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರೋಪಿತರು ಅಟ್ರಾಸಿಟಿ ಕೇಸನ್ನು ಹಾಕುತ್ತಾರೆ ಎಂದು ಜಗದೀಶ ಈ ಸುಳ್ಳು ದೂರನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ಆರೋಪಿತರು 10.00 ಗಂಟೆಗೆ ಜಗದೀಶ ನ ಮನೆಯ ಮುಂದೆ ಬಂದು , ಜಗಳ ಮಾಡಿ ಅವನ ಅಂಗಿ ಹಿಡಿದು ಎಳೆದಾಡಿದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಗೂ ಮೈಲಾರಪ್ಪ ಬಿಡಿಸಲು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಕು ಇಟ್ಟ ಬ್ಯಾಗ ಕಪ್ಪು ಬಣ್ಣದ್ದಾಗಿತ್ತು. ಆರೋಪಿತರು ಚಾಸಾ-7 ಮೈಲಾರಪ್ಪ ಇವರಿಗೆ ಚಾಕುವಿನಿಂದ ಚುಚ್ಚಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಆರೋಪಿತರು ಬೆನ್ನಿಗೆ ಚಾಕುವಿನಿಂದ ಚುಚ್ಚಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿತರ ಮದ್ಯೆ ಈ ಹಿಂದೆ ಯಾವತ್ತು ವೈರತ್ವ ಇರಲಿಲ್ಲ.

9. ಚಾಸಾ-6 ಅವರ ಬಲಗೈ ಅಂಗೈ ಮೇಲೆ ಆರೋಪಿತರು ಚಾಕುವಿನಿಂದ ಚುಚ್ಚಿ ರಕ್ತ ಗಾಯ ಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗದೀಶ ಹಾಗೂ ನಾವು ಆತ್ಮೀಯರು ಎಂದರೆ ಸರಿಯಲ್ಲ. ಜಗದೀಶ ಊರ ಮುಖಂಡರು. ಜಗದೀಶ ಊರಲ್ಲಿ ಯಾವುದಾದರೂ ಜಗಳ ಆದಾಗ ಪೋಲಿಸ ಠಾಣೆಯವರೆಗೆ ಹೋಗಿ ಬಿಡಿಸಿಕೊಂಡು ಬರುತ್ತಾರೆ ಎಂದರೆ ಸರಿ.

10. ಹಾನಗಲ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಕಳ್ಳತನದ ಕೇಸುಗಳು ಇವೆ ಎಂದರೆ ಸರಿಯಲ್ಲ. ಚೆಕ್ ಬೌನ್ಸ ಕೇಸ ಮಾತ್ರ ಇದೆ. ಸದರಿ ಚೆಕ್ ಬೌನ್ಸ ಕೇಸಗಳು ಬಡ್ಡಿ ವ್ಯವಹಾರಕ್ಕೆಂದು ಆದವು ಎಂದರೆ ಸರಿಯಲ್ಲ. ನನ್ನನ್ನು ಪೋಲಿಸ ಠಾಣೆಯಿಂದ ಯಾವುದಾದರೂ ಪ್ರಕರಣವಾದಾಗ ಜಗದೀಶ ಬಿಡಿಸಿಕೊಂಡು ಬರುತ್ತಾರೆ ಎಂದರೆ ಸರಿಯಲ್ಲ.

**11.** ಹಾನಗಲ ನ್ಯಾಯಾಲಯದಲ್ಲಿ ಕಳ್ಳತನದ ಪ್ರಕರಣ ನನ್ನ ಮೇಲೆ ಇದ್ದರೂ , ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12.** ಮೆರವಣಿಗೆ ಹೋಗುವಾಗ ನಮ್ಮ ಊರಿನ ರಸ್ತೆಗಳು ಬಹಳ ಜನ ಹೋಗುವಂತಹ ರಸ್ತೆಗಳು ಇರದೇ, ಇಕ್ಕಟ್ಟಾಗಿರುತ್ತವೆ ಎಂದರೆ ಸರಿ. ನಾನು ಆ ದಿನ ರಸ್ತೆಗೆ ಬರುವ ಸಮಯದಲ್ಲಿ ತಂತಿ ಬೇಲಿಯ ಮೇಲೆ ಬಿದ್ದು ಗಾಯಗಳು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಆದ ಗಾಯಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**13.** ನನ್ನನ್ನು ಊರಿನ ಮುಖಂಡರು 10.20 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಊರ ಹಿರಿಯರು ಚರ್ಚೆ ಮಾಡಿ , ಜಗದೀಶನ ಮೂಲಕ ಈ ಪ್ರಕರಣವನ್ನು ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಜಿಲ್ಲಾಸ್ಪತ್ರೆಯಲ್ಲಿ 4 – 5 ದಿನ ಹಾಗೂ ಕೆ.ಎಮ್.ಸಿ ಯಲ್ಲಿ 2 ದಿನ ಇದ್ದೆ.

**14.** ಚಾಕು ಇದ್ದ ಬ್ಯಾಗ ಲಾಕ್ ಇಲ್ಲದ್ದು ಇತ್ತು. ದ್ವಿಚಕ್ರ ವಾಹನಕ್ಕೆ ಅಳವಡಿಸಿದ ಬ್ಯಾಗನಲ್ಲಿ ಚಾಕು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಸದರಿ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**15.** ಪೋಲಿಸರ ಮುಂದೆ ನಾನು ಘಟನೆಯ ಬಗ್ಗೆ ಹಾನಗಲ ಆಸ್ಪತ್ರೆಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ಪೋಲಿಸರು ವಿಚಾರಿಸಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**16.** ನಾನು ಹೇಳಿದ ಪ್ರಕಾರ ಆದಿನ ರಾತ್ರಿ 10.00 ಗಂಟೆಗೆ ಆರೋಪಿತರು ಹಾಗೂ ಜಗದೀಶನ ಮದ್ಯೆ ಯಾವುದೇ ಘಟನೆ ಆಗದೇ ಇದ್ದರೂ ನಾನು ಊರಿನವರ ಮಾತು ಕೇಳಿ , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಆ ದಿನ ಆರೋಪಿತರು ಜಗದೀಶನಿಗೆ , ಅವನ ಹೆಂಡತಿಗೆ ಹಾಗೂ ಮಗಳಿಗೆ ಯಾವುದೇ ರೀತಿ ದೂಡಾಡುವುದಾಗಲೀ , ಹೊಡಿ – ಬಡಿ ಮಾಡುವುದಾಗಲೀ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

18. ಜಗದೀಶ ಯಾವ ದಿನ ದೂರನ್ನು ಸಲ್ಲಿಸಿರುತ್ತಾನೆಂದು ನನಗೆ ಮಾಹಿತಿ ಇಲ್ಲ.

19. ನಾನುಹೇಳಿದಂತೆ ಯಾವುದೇ ಘಟನೆ ಆಗಿಲ್ಲ , ಆರೋಪಿತರು ಯಾರ ಮೇಲೂ ಆ ದಿನ ಹಲ್ಲೆ ಮಾಡಿಲ್ಲದಿದ್ದರೂ ಸಹ ಜಗದೀಶನ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿ ಇದೆ.**

**(ಅಶ್ವಿನಿ ವಿಜಯ ಶಿರಿಯಣ್ಣನವರ)**
**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಎಫ್.ಟಿ.ಎಸ್.ಸಿ.-1, ಹಾವೇರಿ**